ಕಲಾಭವನದ ನಿರ್ಮಾಣಕ್ಕೆ (1919) ಕೊಡಿಸಿಕೊಟ್ಟಿದ್ದರು. ಮುಂದೆ ಅದು ಮೊದಲ ಆಧುನಿಕ ಭಾರತೀಯ ಕಲಾಶಾಲೆಯಾಗಿ ರೂಪುಗೊಂಡದ್ದು ಈಗ ಇತಿಹಾಸ. ಅದಕ್ಕೆ ಋಣಸಂದಾಯದ ಕ್ರಿಯೆಯಾಗಿ ಎಂಬಂತೆ ಕಲಾಭವನದ ಶಿಕ್ಷಕ ನಂದಲಾಲ ಬೋಸ್ ಅವರು 1930ರ ದಶಕದ ಕಾಂಗ್ರೆಸ್ ಅಧಿವೇಶನದ ಹಿನ್ನೆಲೆಯ ಶೃಂಗಾರಕ್ಕೆ, ಗಾಂಧಿಯವರ ಆದೇಶದಂತೆ 'ಹರಪುರ ಭಿತ್ತಿಚಿತ್ರಗಳು' ಎಂದು ಇಂದು ಪ್ರಸಿದ್ಧವಾಗಿರುವ ಮೂರು ಡಜನ್ ಕೃತಿಗಳನ್ನು ರೂಪಿಸಿಕೊಟ್ಟಿದ್ದರು.

ಗಾಂಧಿಯನ್ನು ಕುರಿತಾಗಿ ರಾಮಚಂದ್ರ ಗುಹಾ ಅವರು ಬರೆದ 'ಗಾಂಧಿ ಬಿಫೋರ್ ಇಂಡಿಯಾ' ಮತ್ತು 'ಇಂಡಿಯಾ ಆಫ್ಟರ್ ಗಾಂಧಿ', ಇವೆರಡರಲ್ಲೂ ಕಲೆ ಎಂಬುದು ಇಲ್ಲವೇ ಇಲ್ಲ ಎಂದು ಲೇಖಕಿ ಸುಮತಿ ರಾಮಸ್ವಾಮಿ ಸೂಕ್ತವಾಗಿಯೇ ಆಕ್ಷೇಪಿಸಿದ್ದರು. ಭಾರತದ ಇತಿಹಾಸವನ್ನು ಸಮ್ಯಕ್ ದೃಷ್ಟಿಯಿಂದ ಹಿಡಿದಿರಿಸುವ ಮಹತ್ವಾಕಾಂಕ್ಷೆಯ ಈ ಪುಸ್ತಕದಲ್ಲಿ ಭಾರತೀಯ ಕಲೆಯೇ ಮಾಯವಾಗಿದೆ. ರಿಚರ್ಡ್ ಅಟೆನ್‌ಬರೋ ರೂಪಿಸಿದ 'ಗಾಂಧಿ' ಸಿನಿಮಾದಲ್ಲಿ ಅಂಬೇಡ್ಕರ್ ಇಲ್ಲವೇ ಇಲ್ಲ! ಬ್ರಿಸ್ಟಲ್ ನಗರದಲ್ಲಿ ಗಾಂಧಿ ಅಥವಾ ರಾಜಾರಾಮ್ ಮೋಹನ್ ರಾಯ್ ಅವರಲ್ಲಿ ಯಾರ ಪ್ರತಿಮೆಯನ್ನು ಸ್ಥಾಪಿಸಬೇಕು ಎಂದು ಇಂಗ್ಲೆಂಡಿನ ಗುಜರಾತಿಗಳು ಹಾಗೂ ಬೆಂಗಾಲಿಗಳು ಜಗಳವಾಡಿದ್ದಿದೆಯಂತೆ. ಕೊನೆಗೆ ಗೆದ್ದದ್ದು ಬೆಂಗಾಲಿಗಳೇ. ಗಾಂಧೀಜಿಗೂ ಕಲೆಗೂ ಇರುವ ಸಂಬಂಧದ ಅಯೋಮಯತೆಯ ಇತಿಹಾಸದ ಅಗಾಧತೆಯು ಅಚ್ಚರಿ ಮೂಡಿಸುವಷ್ಟು ವಿಕ್ಷಿಪ್ತವಾದುದಾಗಿದೆ.

ಕನ್ನಡಕ ಕಳೆದರೆ, ಕೋಲು ಮುರಿದರೆ, ಕೊಳೆ ಮೆತ್ತಿದರೆ ಗಾಂಧಿಯ ಪ್ರತಿಮೆ ಎಂದೂ ಸಿಟ್ಟಾಗಿದ್ದಿಲ್ಲ. ಇವರ ಪ್ರತಿಮೆಗೆ ಬೇಲಿಯ ಅಗತ್ಯವಿಲ್ಲ. ಯಾವ ಮೆಟ್ರೊ ನಿರ್ಮಾಣಕ್ಕೂ ಇವರ ಶಿಲ್ಪಗಳು ಅಥವಾ ಶಿಲ್ಪಾಭಿಮಾನಿಗಳು ತೊಡರಾಗಿದ್ದಿಲ್ಲ. ವಿಶೇಷವೆಂದರೆ ಭಾರತೀಯ ಸಂಸ್ಕೃತಿಯ ಅಲ್ಪ ಪರಿಚಯವಿರುವ ಹಾಲಿವುಡ್ ಸಿನಿಮಾ ಮಂದಿಯೂ, ತಮ್ಮ ಸಿನಿಮಾಗಳಲ್ಲಿ ಸ್ವಲ್ಪ ಎಡಕ್ಕೆ ವಾಲುವ ಪಾತ್ರಧಾರಿಗಳಿದ್ದರೆ ಸಾಕು, ಅವರ ಮನೆ ದೃಶ್ಯಗಳಲ್ಲಿ ಗಾಂಧಿಯ ಚಿತ್ರವನ್ನು ಇರಿಸಿಬಿಡುತ್ತಾರೆ, 'ಗಾಂಡಿ' ಎಂಬ ಹೆಸರನ್ನೂ ಬಳಸುತ್ತಾರೆ ಮತ್ತು ಸಾಧ್ಯವಾದರೆ ಜೊತೆಗೆ 'ಕರ್ಮ' ಎಂಬ ಪದವನ್ನೂ ಸೇರಿಸಿಬಿಡುತ್ತಾರೆ. ಪೂರ್ವವನ್ನು ಪಶ್ಚಿಮಕ್ಕೆ ವಸಾಹತು ಕೊಂಡೊಯ್ದರೆ ಈಗ ಅವರ ಉತ್ತರಾಧಿಕಾರಿಗಳಿಗೆ ಆ ಕೊಳೆಯನ್ನು ತೊಳೆದುಕೊಳ್ಳಲು ಸುಲಭಕ್ಕೆ ಲಭ್ಯವಿರುವುದು ಗಾಂಧಿಯ ಚಿತ್ರಗಳು, ಬರವಣಿಗೆ, ನಿಲುವು ಹಾಗೂ ಒಂದು ಅತಿಮಾನುಷ ಆದರ್ಶ. ಅಸ್ಪೃಶ್ಯತೆಯನ್ನು ಆಚರಿಸುತ್ತಿದ್ದ ನಿಗೂಢ ಆಫ್ರಿಕಾ ಖಂಡದಿಂದ ಜೀನ್ ಶಾರ್ಪ್ ಅಂತಹ ಅಮೆರಿಕದ ಸಮಾಜ ವಿಜ್ಞಾನಿಯವರೆಗೂ 'ಗಾಂಧಿ' ಎಂಬುದು ಭಾರತದ ಮೌಲ್ಯಯುತ ಸಾರ್ವಕಾಲಿಕ ಕೊಡುಗೆ, ಸೊನ್ನೆಯ ನಂತರ.



ಕೆ. ಎಂ. ಆದಿಮೂಲಂ ಅವರ ರೇಖಾಚಿತ್ರ.

★★★

ಇಂತಹ ಗಾಂಧೀ ತಾತನನ್ನು ಕಲಾವಿದರು ತಮ್ಮ ಕಲಾಕೃತಿಗಳಲ್ಲಿ ವಿಪುಲವಾಗಿ